# ಗುಲಾಬಿ ಮತ್ತು ಅದರ ಮುಳ್ಳುಗಳು

ಕಮಲೇಶ್ ಪಟೇಲ್

ಪ್ರಿಯ ಸ್ನೇಹಿತರೆ,

ನಾವು ಮೂರು ಅತೀ ಮಹತ್ತ್ವದ ಕ್ಷಣಗಳ ಸಂಗಮದಲ್ಲಿ ಒಂದು ಗೂಡಿದ್ದೇವೆ: ನಮ್ಮ ಪೂಜ್ಯ ಆದಿಗುರು ಫತೇಹ್‌ಗಢದ ಶ್ರೀ ರಾಮಚಂದ್ರರ (ಲಾಲಾಜಿ ಮಹಾರಾಜ್) 147ನೇ ಜನ್ಮವಾರ್ಷಿಕೋತ್ಸವ, ಅವರ ಹೆಸರಿನಲ್ಲಿ ಸಂಸ್ಥಾಪಿಸಲಾದ ಮಹಾನ್ ಆಧ್ಯಾತ್ಮಿಕ ಸಂಸ್ಥೆ – ಶ್ರೀ ರಾಮಚಂದ್ರ ಮಿಷನ್ನಿನ 75ನೇ ವಾರ್ಷಿಕೋತ್ಸವ, ಹಾಗು ಕಾನ್ಹಾ ಶಾಂತಿವನಂ ಧ್ಯಾನಮಂದಿರದ ಉದ್ಘಾಟನೆ.

ಲಾಲಾಜಿಯವರ ದಿವ್ಯಾಗಮನದ ನಂತರ, ಜೀವಂತ ಗುರುವೊಬ್ಬರು ಸದಾ ನಮ್ಮೆಲ್ಲರೊಂದಿಗಿರುವಂತೆ ಪ್ರಕೃತಿಯು ವ್ಯವಸ್ಥೆ ಮಾಡಿದೆ. ದೂರದಿಂದಲೇ ಗುಲಾಬಿಯ ಸೌಂದರ್ಯವನ್ನು ನಾವು ಹೇಗೆ ಆಸ್ವಾದಿಸಬಲ್ಲೆವೊ, ಹಾಗೆಯೆ ಒಬ್ಬ ಯೋಗ್ಯನಾದ ಶಿಷ್ಯನು ಗುರುವಿನ ಸನ್ನಿಧಿಯನ್ನು ದೂರದಿಂದಲೇ ಆನಂದಿಸಲು ಸಮರ್ಥನಾಗಿರುತ್ತಾನೆ. ಆದರೂ, ಗುಲಾಬಿಯ ಸುಗಂಧವನ್ನು ಆಘ್ರಾಣಿಸಲು ಅದರ ಬಳಿಸಾರಬೇಕಾಗುತ್ತದೆ. ಅದನ್ನು ನಿಮ್ಮ ಕೈಯಲ್ಲಿ ಹಿಡಿದುಕೊಳ್ಳಬೇಕಾಗುತ್ತದೆ. ನೀವು ಎಲ್ಲೇ ಇದ್ದುಕೊಂಡು ಗುರುವನ್ನು ಕಾಣಬಹುದಾಗಿದ್ದರೂ, ಎಲ್ಲೋ ಏನನ್ನೋ ಕಳೆದುಕೊಳ್ಳುತ್ತಿದ್ದೀರಿ. ಒಂದು ಘಟ್ಟದಲ್ಲಿ, ನೀವು ಅವರ ಸಾನ್ನಿಧ್ಯದಲ್ಲಿರಬೇಕಾಗುತ್ತದೆ. ಆದರೆ ಈ ಹೂವನ್ನು ಹಿಡಿದುಕೊಳ್ಳುವಾಗ ಎಚ್ಚರ! ಅದರಲ್ಲಿರುವ ಮುಳ್ಳುಗಳು ನಿಮಗೆ ಚುಚ್ಚಬಹುದು. ಗುರುಗಳ ಭೌತಿಕ ಸಾನ್ನಿಧ್ಯ ಅದೆಷ್ಟು ಸದವಕಾಶಗಳನ್ನು ನೀಡಬಲ್ಲುದೊ, ಅಷ್ಟೇ ಅಪಾಯಗಳ ಸಂಭವವೂ ಇದೆ. ಅವುಗಳನ್ನು ಹೃತ್ಪೂರ್ವಕವಾಗಿ ಎದುರಿಸಿದರೆ, ಈ ಅಪಾಯಗಳು ಮತ್ತೂ ಶ್ರೇಷ್ಠ ವರವಾಗಿ ಪರಿಣಮಿಸುತ್ತವೆ. ಆದರೆ ಅಂತಹ ಸಂದರ್ಭದಲ್ಲಿ ಹೃದಯ ಕರಗದೆಹೋದರೆ, ಅವು ನಿಮ್ಮ ಆಧ್ಯಾತ್ಮಿಕ ದುರಂತದ ಕೂಪಕ್ಕೆ ತಳ್ಳುತ್ತವೆ.

ಬಾಬೂಜಿಯವರು ಗಮನಿಸಿದ ಅಂಶವೆಂದರೆ, ಜನರು ಲಾಲಾಜಿಯವರ ಕಾಲದಲ್ಲಿ ಉನ್ನತ ಆದರ್ಶಗಳನ್ನು ಬೆಂಬತ್ತಿ ಬರುತ್ತಿದ್ದರಾದರೂ, ತಮ್ಮದೇ ಕಾಲದಲ್ಲಿ ಮನಶ್ಶಾಂತಿಯನ್ನು ಅರಸಿ ಬರುತ್ತಿದ್ದರು. ಅದು ದಶಕಗಳ ಹಿಂದಿನ ಮಾತು. ಕಾಲ ಬದಲಾಗುತ್ತಿದ್ದಂತೆ, ಅವುಗಳ ಅಧೋಮುಖಗತಿ ಮುಂದುವರೆದಿದೆ. ಇಂದು, ಜನರು ಗುರುಗಳ ಬಳಿಗೆ ಜೀವನದ ಪ್ರಾಪಂಚಿಕ, ಐಹಿಕ ವಿಷಯಗಳನ್ನು ಕುರಿತಾದ ಮಾರ್ಗದರ್ಶನವನ್ನು

ಅರಸಿ ಬರುತ್ತಾರೆ. ಅಸಂಖ್ಯಾತ ಸಾಂಸಾರಿಕ ಜಂಜಾಟಗಳನ್ನು ಹೊತ್ತ ಅವರು, "ಸಮಸ್ಯೆ ಪರಿಹರಿಸದ ಗುರು ಏಕಾದರೂ ಬೇಕು? ನಾವು ಆತನ ಬಳಿ ಹೋಗುವುದು ಅದಕ್ಕಾಗಿಯೇ ಅಲ್ಲವೆ!" ಎಂದು ವಾದಿಸುತ್ತಾರೆ. ಅವರು ವಾರ್ಷಿಕೋತ್ಸವ, ಹುಟ್ಟುಹಬ್ಬ, ವಿವಾಹ, ಗೃಹಪ್ರವೇಶ, ಹೊಸ ಉದ್ಯೋಗ ಅಥವಾ ವ್ಯಾಪಾರದ ಶುಭಾರಂಭದಂತಹ ವಿಶೇಷದಿನಗಳಂದು ಆಶೀರ್ವಾದ ಪಡೆಯಲು ಅಥವಾ ಯಾರ ಬಗೆಗೋ ದೂರು ನೀಡಲು ಬರುತ್ತಾರೆ. ಗುರುಗಳಿಂದ 'ಇದನ್ನೋ ಅಥವಾ ಅದನ್ನೋ' ನಿರೀಕ್ಷಿಸಿದರೆ ಫಲಿತಾಂಶವೇನಾಗುತ್ತದೆ? ಯಾವುದೇ ನಿರ್ದಿಷ್ಟ ಬಗೆಯ ಆಶೀರ್ವಾದವನ್ನು ಪಡೆಯಲು ಬಯಸಿದರೆ, ಆ 'ಪಡೆಯುವ ಬಯಕೆ'ಯೇ ಅಡ್ಡಿಯಾಗುತ್ತದೆ. ನೀವು ಐಹಿಕ ಆಶೀರ್ವಾದ ಅಥವಾ ಆಧ್ಯಾತ್ಮಿಕ ಪ್ರಗತಿಯನ್ನು ಪಡೆಯಬಯಸಬಹುದು; ಆ ನಿರೀಕ್ಷಾಭಾವವೇ ನಿಮ್ಮ ಹೃದಯಗಳ ನಡುವಣ ಹರಿವಿಗೆ ತಡೆಯನ್ನೊಡ್ಡುತ್ತದೆ. ಗುರುಗಳು ಉನ್ನತ ವರಗಳನ್ನು ನೀಡಲು ಸಿದ್ಧರಾಗಿರುತ್ತಾರೆ, ಆದರೆ ಜನರು ವಿವೇಚನಾರಹಿತರಾಗಿ ಜನ್ಮದಿನದ ಶುಭಾಶಯದಂತಹ ಅಲ್ಪ ಬೇಡಿಕೆಗಳನ್ನಿಟ್ಟು ಅವುಗಳಿಂದ ವಂಚಿತರಾಗುತ್ತಾರೆ!

ನಿಜವಾದ ವರ ಯಾವುದು? *ಯಾವುದು ಜೀವನದ ಒಗಟನ್ನು ಬಿಡಿಸುವುದೊ, ಯಾವುದು ಜೀವನದ ಉದ್ದೇಶವನ್ನು ಸಫಲಗೊಳಿಸುವುದೊ, ಅದು.* ನಿಮ್ಮ ಜೀವಿತಾವಧಿಯಲ್ಲಿ ಅಂತಹ ವರವನ್ನು ಒಮ್ಮೆ ಪಡೆದ ನಂತರ, ಬೇರೊಂದು ವರದ ಅವಶ್ಯಕತೆಯಿರುವುದೆ? ಆದುದರಿಂದಲೇ, ನೀವು ನಿಮ್ಮ ಜೀವಿತಾವಧಿಯಲ್ಲಿ ಗುರುವನ್ನು ಒಮ್ಮೆ ಭೇಟಿಯಾದರೆ ಸಾಕೆಂದು ಬಾಬೂಜಿ ಮಹಾರಾಜರು ಘೋಷಿಸಿದ್ದಾರೆ; ಮುಂದಿನ ಭೇಟಿಗಳೆಲ್ಲ ಹೆಚ್ಚುವರಿ ಲಾಭವಷ್ಟೆ (ಬೋನಸ್). ಆದುದರಿಂದಲೇ, ಆ ಏಕಮಾತ್ರ ಭೇಟಿಯಲ್ಲಿ ನಿಮ್ಮ ಮನೋಭಾವ ಬಹುಮುಖ್ಯವಾಗಿರುತ್ತದೆ.

ಒಬ್ಬ ವ್ಯಕ್ತಿ ಏನನ್ನೂ ಬಯಸದೆ, ಕೇವಲ ಪ್ರೇಮದ ಸಲುವಾಗಿಯೇ ಪ್ರೇಮಿಸಲು, ಗುರುವಿನ ಬಳಿ ಬರುವುದು ಬಲು ಅಪರೂಪ. ಅಂತಹ ಸರಳ ಸುಂದರ ವಿಧಾನವು, ಕೃಷ್ಣಪರಮಾತ್ಮನು ಬಹುವಾಗಿ ಕೊಂಡಾಡುವ *'ನಿಷ್ಕಾಮ ಕರ್ಮ'* ದ ನಿದರ್ಶನ. ಅಂತಹ ಪ್ರೇಮಮಯ ಮತ್ತು ಇಚ್ಛಾರಹಿತ ಹೃದಯದೊಳಗೆ ನಿಶ್ಯಬ್ದವಾಗಿ, ಆಹ್ವಾನವಿಲ್ಲದೆ ಗುರು ಹರಿದುಬರುವನು. ಗುರು–ಶಿಷ್ಯರ ನಡುವೆ ಒಂದು ಬಗೆಯ ಸಂವಹನವಿದ್ದು, ಪಡೆಯುವ ಮತ್ತು ನೀಡುವ ಹೃದಯಗಳೆರಡೂ ಪರಸ್ಪರ ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳುತ್ತವೆ. ಅವೆರಡರ ನಡುವಿನ ಅನುರಣನವು ತಾನಾಗಿಯೇ ಆರಂಭವಾಗಿ, ಯಾವುದೇ ವಿವರಣೆ,

ಸಮರ್ಥನೆ ಅಥವಾ ಪುಷ್ಟೀಕರಣದ  ಅಗತ್ಯವಿರದೆ, ಎರಡೂ ಪರಿಪೂರ್ಣ ನೀರವತೆಯಲ್ಲಿ ಒಂದು ಅದ್ಭುತಶಕ್ತಿಯೊಡನೆ ಸ್ಪಂದಿಸಲಾರಂಭಿಸುತ್ತವೆ. ಆದಾಗ್ಯೂ, ಎಷ್ಟೇ ವರ್ಷಗಳು ಉರುಳಿದರೂ, ಎಷ್ಟೇ ಸಮಯ ಸರಿದರೂ, ಸಾಧಕನ ಹೃದಯವು ಅನವರತ ಇಚ್ಛೆಗಳಿಂದ ತುಂಬಿದ್ದಲ್ಲಿ, ಈ ಅಧಿಕೃತ ಅನುರಣನ ಮುಂದೂಡಲ್ಪಡುವುದು ಮಾತ್ರ ಖಚಿತ. ಕಣ್ಣೆವೆ ಇಕ್ಕುವಷ್ಟರಲ್ಲಿ ಸಂಭವಿಸಬಹುದಾಗಿದ್ದ ಸಂಗತಿಗೀಗ ಅಗಣಿತ ಜನ್ಮಗಳೇ ಬೇಕಾಗಬಹುದು.

ಸಂಪೂರ್ಣ *ಪ್ರತ್ಯಾಹಾರ*ವನ್ನು ಅರ್ಥೈಸಿಕೊಂಡು, ಅನುಷ್ಠಾನ ಮಾಡುತ್ತಲೇ ಇರುವುದರಿಂದ, ಗುರುವು ಶಿಷ್ಯನ ಜೀವನದ ಕೇಂದ್ರಬಿಂದುವಾಗುತ್ತಾನೆ. ಈಗ, ಗುರುವಿನ ದೈವೀಗುಣಗಳ ಅನುಭೂತಿಯಾಗಿ, ಶಿಷ್ಯನು ಗುರುವನ್ನು ಭೌತಿಕವಾಗಿ ಸಮೀಪಿಸಲು ಪ್ರೇರಣೆ ದೊರೆಯುತ್ತದೆ. ಈ ಪ್ರೇರಣೆ ಆಂತರ್ಯದಿಂದ ಹೊರಹೊಮ್ಮಬೇಕು. ದುರ್ದೈವದಿಂದ, ಹೊಸಬರು ಮತ್ತು ವಿ.ಐ.ಪಿ.ಗಳ ಸಂದರ್ಭದಲ್ಲಾಗುವಂತೆ, ಜನರನ್ನು ಅಪಕ್ವ ಸ್ಥಿತಿಯಲ್ಲಿದ್ದಾಗಲೇ ಗುರುಗಳ ಸಮಕ್ಷಮಕ್ಕೆ ಕರೆತಂದಾಗ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಯಾರಲ್ಲಾದರೂ ಈ ಪದ್ಧತಿ ಮತ್ತು ಅಭ್ಯಾಸಗಳ ತಿಳಿವು ಹಾಗು ಅನುಭವ ಕೊಂಚವಾದರೂ ಇಲ್ಲವಾದಲ್ಲಿ, ಗುರುಗಳೊಂದಿಗಿರುವ ಆ ಕ್ಷಣದಲ್ಲಿ ತಾವೇನು ಪಡೆಯುವರೊ, ಅದರ ಮೌಲ್ಯ ಅವರಿಗೆ ಅರಿವಾಗುವುದು ಕಷ್ಟಕರ.

ಪರಿಸ್ಥಿತಿಯ ಅರಿವಿಲ್ಲದ, ಚಿಕ್ಕ ಮಕ್ಕಳನ್ನು ಕರೆದುಕೊಂಡು ಬಂದಾಗ ನಾವು ಹೆಚ್ಚಿನ ಜಾಗ್ರತೆವಹಿಸಬೇಕಾಗುತ್ತದೆ. ಅವರನ್ನು ಬಲವಂತ ಮಾಡಿದರೆ ಪ್ರಯೋಜನವಿಲ್ಲ. ರಾತ್ರಿ ಅವರಿಗೆ ನಿದ್ರೆ ಬಂದಾಗ ಆರಾಮದಾಯಕ ಕೋಣೆಗೆ ನೀವು ಹೋಗದಿದ್ದರೆ ಅಥವಾ ಅವರಿಗೆ ರೂಢಿಯಿಲ್ಲದಿದ್ದರೂ ಅವರನ್ನು ನೆಲದ ಮೇಲೆ ಕುಳ್ಳಿರಿಸಿದರೆ ಅಥವಾ ಆಶ್ರಮದಲ್ಲಿ ನೀಡಿದುದೆಲ್ಲವನ್ನೂ ಪ್ರಸಾದವೆಂದು ಹೇಳುತ್ತ ತಿನ್ನುವಂತೆ ಒತ್ತಾಯಿಸಿದರೆ, ಅವರು ತಿರುಗಿಬಿದ್ದು ಅಂತಹ ಪರಿಸ್ಥಿತಿಗಳನ್ನು ದ್ವೇಷಿಸತೊಡಗಬಹುದು. ಅವರನ್ನು ಗುರುಗಳ ಬಳಿ ಕರೆತಂದಾಗ, ಇಂತಹುದೇ ಅಹಿತಕರ ಪರಿಸರಗಳನ್ನು ಅನೇಕ ಬಾರಿ ಎದುರಿಸಿದ ನಂತರ ಅದು ಹೆಚ್ಚುತ್ತ ಹೋಗುತ್ತದೆ. ಸೋಲನ್ನು ಕಂಡ ಅವರ  ಭಾವನೆಗಳು ಸುಪ್ತಮನಸ್ಸಿನಲ್ಲಿ ಹುದುಗಿಹೋಗಿ, ವಯಸ್ಕರಾದ ನಂತರ ಅವರ ಮತ್ತು ಗುರುಗಳ ನಡುವೆ ತಡೆಗೋಡೆಯಾಗಿ ನಿಲ್ಲಬಹುದು.

ಗುರುಗಳನ್ನು ಹೃತ್ಪೂರ್ವಕವಾಗಿ ಸಮೀಪಿಸುವ ವಿಧಾನ ಅದೆಷ್ಟು ಒಳ್ಳೆಯದು! ಶ್ರದ್ಧಾವಂತ ಅಭ್ಯಾಸಿಗಳು ಗುರುಗಳನ್ನು ಭೇಟಿಯಾಗಲೆಂದು ಮನೆಯಿಂದ ಹೊರಡುವ ಮುನ್ನ, ತಮ್ಮ ಅಂತರಂಗದಲ್ಲಿ ಪ್ರೇಮ, ಗೌರವ

ಮತ್ತು ವಿಸ್ಮಯಗಳಿಂದ ತುಂಬಿದ ಮನೋಭಾವವನ್ನು ಹೊಂದಿರುತ್ತಾರೆ. ಗುರುಗಳ ಸಮಕ್ಷಮಕ್ಕೆ ಬರುವಾಗ, ಅವರ ಕೋಣೆಯನ್ನು ಸೌಮ್ಯವಾಗಿ ಪ್ರವೇಶಿಸುತ್ತಾರೆ. ಅವರ ಕಣ್ಣುಗಳು ನೆಲವನ್ನು ನಿರುಕಿಸುತ್ತಿರುತ್ತವೆ – ಅದು ಪ್ರಾರ್ಥನಾಭರಿತ ಹೃದಯದಿಂದ ಪವಿತ್ರವೆಂದು ಪರಿಗಣಿಸುವ ನೆಲವಾಗಿರುತ್ತದೆ. ಅವರು ತಮ್ಮ ದೇಹದ ಪೂರ್ಣ ಭಾರವು ನೆಲಕ್ಕೆ ಹೊರೆಯಾಗದಂತೆ ಲಘುವಾಗಿ, ನಿಧಾನವಾಗಿ ನಡೆಯುವರು. ಅಂತಹ ನಿಜವಾದ ಶಿಷ್ಯರು ಎಲ್ಲಕ್ಕೂ ಮುಂದಿರುವ ಅಥವಾ ಹಿತಕರ ಜಾಗವನ್ನು ಹುಡುಕುವುದಿಲ್ಲ. ಗುರುಗಳ ಸಮ್ಮುಖದಲ್ಲಿ, ಅವರು ತಮ್ಮೆಲ್ಲ ಕಲ್ಪನೆಗಳು, ಇಚ್ಛೆಗಳು ಹಾಗು ಅನಿಸಿಕೆಗಳನ್ನು ಬಿಟ್ಟುಬಿಡುತ್ತಾರೆ. ಗುರುಗಳಿಗೆ ಸಂತೋಷವಾಗುವ ರೀತಿಯಲ್ಲಿ ಅವರು ನಿಜಕ್ಕೂ ಸಿದ್ಧರಾಗಿರಬೇಕೆಂದರೆ, ತಾತ್ಕಾಲಿಕವಾಗಿಯಾದರೂ, ಎಲ್ಲವೂ ಹೀಗಿರಬೇಕು.

ನಿರಂತರವಾಗಿ ಎಲ್ಲವನ್ನೂ ವಿಶ್ಲೇಷಿಸುತ್ತ, ನಿರ್ಧಾರಗಳನ್ನು ತಳೆಯುತ್ತಿದ್ದರೆ, ಗುರುಗಳ ಕಾರ್ಯದಲ್ಲಿ ವಿಚಲನವುಂಟಾಗುತ್ತದೆ. ಗುರುಗಳೆದುರಿನಲ್ಲಿ ಪ್ರತ್ಯೇಕತೆ ಕೊನೆಗೊಳ್ಳಲೇಬೇಕು; ಹಾಗೇನಾದರೂ ಅದು ಉಳಿದುಕೊಂಡಿದ್ದಲ್ಲಿ, ನಿಜವಾದ ಅಭ್ಯಾಸಿಯು ಗೌರವಮಿಶ್ರಿತ ಮೌನ ತಳೆಯುತ್ತಾನೆ. ಗುರುವಿನ ಪ್ರತಿಯೊಂದು ನಡೆಯನ್ನೂ ವಿಶ್ಲೇಷಿಸುವುದು ಶಿಷ್ಯನಿಗೆ ಸಾಧುವಲ್ಲ. ನಿಜವಾದ ಸಂಭಾಷಣೆ ನಡೆಯಬೇಕಾದರೆ, ನಿಜವಾದ ಸಂವಹನ ಸಂಭವಿಸಬೇಕಾದರೆ, ಸಂಪೂರ್ಣವಾದ ಆಂತರಿಕ ಮೌನದ ಅವಶ್ಯಕತೆಯಿದೆ. ಲಕ್ಷ್ಯವು ಸಂಪೂರ್ಣವಾಗಿ ಗುರುವಿನ ಮೇಲಿರುವಾಗ, ಅರಸುವ ಕಣ್ಣುಗಳು, ಪ್ರಶ್ನಿಸುವ ಮನಸ್ಸುಗಳು ಮತ್ತು ಹಂಬಲಿಸುವ ಹೃದಯಗಳು ಹಿಮ್ಮೆಟ್ಟಿರಲೇಬೇಕು. ನಿಮ್ಮ ಆಂತರಿಕ ಸ್ಥಿತಿ ಆತನೊಂದಿಗೆ ಅನುರಣಿಸುವ ಅನುಭೂತಿ ಪಡೆಯಿರಿ.

ನೀವು ಗುರುವಿಗೆ ತೀರ ಸಮೀಪವಾಗಿ ಹೋದಾಗ, ಬೇರೊಂದು ಬಗೆಯ ತೊಂದರೆ ಆರಂಭವಾಗುತ್ತದೆ. ಮುಂದೆ, ಈ ತೊಂದರೆ ಅನುಗ್ರಹವಾಗಬಹುದು ಅಥವಾ ಅಪಾಯಕಾರಿಯಾಗಿ ಪರಿಣಮಿಸಬಹುದು. ಎಂದಿನಂತೆ, ಅದು ಶಿಷ್ಯನನ್ನು ಅವಲಂಬಿಸಿರುತ್ತದೆ. ಗುರುವಿನ ವಿಲಕ್ಷಣತೆ ಅಥವಾ ವಿಶಿಷ್ಟತೆಗಳು ಈಗ ಶಿಷ್ಯನಿಗೆ ಕಾಣಲಾರಂಭಿಸುತ್ತವೆ. ಆತನೀಗ ಈ ಗುಣಗಳನ್ನು ತುಲನೆ ಮಾಡಲಾರಂಭಿಸುತ್ತಾನೆ ಮತ್ತು ಮೊದಲಿಗೆ ದೈವಿಕವೆಂದು ತೋರಿದ್ದ ಗುರುವಿನ ಮೇಲ್ನೋಟದ ಅಲ್ಪತೆಯ ಬಗೆಗೆ ಅವಲೋಕಿಸುತ್ತಾನೆ. ಬಾಬೂಜಿಯವರು ಒಮ್ಮೆ ಹೇಳಿದಂತೆ, “ಅನೇಕರು ನನ್ನನ್ನು ನೋಡಲು ಬರುತ್ತಾರೆ, ಆದರೆ ಯಾರೂ ನನ್ನನ್ನು ಕಾಣುವುದಿಲ್ಲ!”. ಸಾಮಾನ್ಯವಾಗಿ, ನಮ್ಮ ಪ್ರಜ್ಞೆ ಹಾಗು ಅರಿವಿನ ಸ್ತರವು ಗ್ರಹಿಸುವಷ್ಟನ್ನು ಮಾತ್ರ ನಾವು

ಕಾಣಬಲ್ಲೆವು. ಕೆಳಸ್ತರದ ಪ್ರಜ್ಞೆಯ ಆಳ್ವಿಕೆಗೆ ಒಳಪಟ್ಟ ನಮ್ಮ ದೃಷ್ಟಿಯು, ಉನ್ನತ ಆಯಾಮಗಳನ್ನು ಕಾಣುವುದು ಸವಾಲೆನಿಸುತ್ತದೆ. ನಾವು ಕಾಣುವುದೆಲ್ಲವೂ ನಮ್ಮದೇ ಪ್ರಜ್ಞೆಯ ಬಿಂಬವಾಗಿರುತ್ತದೆ, ಹೀಗೆ ಗುರುಗಳು ದರ್ಪಣದಂತಾಗುತ್ತಾರೆ. ನಮ್ಮದೇ ಧೋರಣೆಗಳು, ನಿರೀಕ್ಷೆಗಳನ್ನು ಆಧರಿಸಿರುವುದನ್ನು ಅಥವಾ ಸರಳವಾಗಿ ಹೇಳಬೇಕೆಂದರೆ, ನಮ್ಮ ಸಂಸ್ಕಾರಗಳನ್ನು ನಾವು ಅವರಲ್ಲಿ ಕಾಣುತ್ತೇವೆ. ಈ ಸಂಸ್ಕಾರಗಳು ತಮ್ಮ ಲೀಲೆಯ ತೋರಿ, ಖಂಡಿತವಾಗಿ ಸಂದೇಹವನ್ನು ಹಾಗು ಸ್ವಲ್ಪ ಮಟ್ಟಿಗೆ ಅಸಮ್ಮತಿ ಮತ್ತು ಆಶಾಭಂಗವನ್ನು ಹುಟ್ಟುಹಾಕುತ್ತವೆ. ಅದು ಮುಂದೆ ಹೆಚ್ಚು ಪ್ರತಿರೋಧವನ್ನು ಸೃಷ್ಟಿಸುತ್ತಲೇ ಹೋಗುತ್ತದೆ. ವ್ಯಕ್ತಿಯು ತನ್ನ ಹಾಗು ಗುರುವಿನ ಮಧ್ಯೆ ಗೋಡೆಯನ್ನು ಕಟ್ಟಿಕೊಳ್ಳಲಾರಂಭಿಸುತ್ತಾನೆ. ಹೀಗಾಗುವುದನ್ನು ತಡೆದರೆ ಮಾತ್ರವೇ ಗುರುವನ್ನು ಗುರುವೆಂದು ಭಾವಿಸಲು ಸಾಧ್ಯ. ಇದನ್ನು ತಡೆಯಲು ಸಾಧ್ಯವೆ? ಅದು ಶಿಷ್ಯನನ್ನು ಅವಲಂಬಿಸಿದೆ.

ನೀವು ಈ ಹಂತದಲ್ಲಿ ಬಂದಿದ್ದರೆ ದಯವಿಟ್ಟು ನಿರಾಶರಾಗದಿರಿ; ಏಕೆಂದರೆ ಗುರುಗಳಲ್ಲಿ ನೀವು ಕಂಡ ವಿಲಕ್ಷಣತೆಗಳನ್ನು ಸರಿಯಾಗಿ ಅರ್ಥೈಸಿಕೊಂಡಿದ್ದರೆ ಅದು ನಿಮ್ಮ ಮುಂದಿನ ಪ್ರಗತಿಗೆ ನಾಂದಿಯಾಗಬಹುದು. ಈ ಗೊಂದಲಮಯ ಸನ್ನಿವೇಶಗಳನ್ನು ಉಪಯೋಗಿಸಿಕೊಳ್ಳಿರಿ; ಮತ್ತು ಒಂದು ಕಾಲಕ್ಕೆ ಗುರುಗಳಲ್ಲಿ ತಾರ್ಕಿಕವಾಗಿ ಅಪಾಯವೆಂದು ಕಂಡ ಪ್ರತಿ ಸೂಕ್ಷ್ಮ ವಿಷಯವನ್ನೂ ಸಹಜವಾಗಿ ಅರಿತುಕೊಳ್ಳುವ ದೈವಿಕ ಮತ್ತು ಹಂಬಲಪೂರ್ಣ ಹೃದಯವಿದ್ದರೆ, ಅದು ಹೇಗೆ ಅವೆಲ್ಲವೂ ಸುಲಭವಾಗಿ ಪರಿಹಾರವಾಗುತ್ತವೆ ಎಂಬುದನ್ನು ಕಾಣಿರಿ. ಗುರುಗಳಲ್ಲಿ ಮೇಲ್ನೋಟಕ್ಕೆ ಕಾಣುವ ಭಿನ್ನತೆಗಳನ್ನು ತಮ್ಮ ಹೃದಯದಲ್ಲಿ ಏಕೀಕೃತಗೊಳಿಸಲು ವಿಫಲರಾದ ಶಿಷ್ಯಂದಿರು ತಾವೇ ತಮ್ಮ ಮುನ್ನಡೆಗೆ ಬಾಧಕರಾಗುತ್ತಾರೆ. ಯಾವುದೋ ಒಂದು ಹಂತದಲ್ಲಿ, ಪ್ರತಿಯೊಬ್ಬ ಶಿಷ್ಯನೂ ತನ್ನ ಗುರುವನ್ನು ತನ್ನ ಹೃದಯದಲ್ಲಿ ತೀವ್ರವಾಗಿ ಟೀಕಿಸಿರುತ್ತಾನೆ. ಈ ಹಂತವನ್ನು ಅರಿತುಕೊಂಡು, ಅದನ್ನು ಮೀರಿ ನಡೆದಾಗ ಅವರು ತ್ರಿವಿಕ್ರಮ ಹೆಜ್ಜೆಯನ್ನಿಟ್ಟಿರುತ್ತಾರೆ.

ಮೊದಲಿಗೆ ಹೊಸದಾಗಿ ಕಂಡುಕೊಂಡ ಆಧ್ಯಾತ್ಮಿಕ ಗುರುಗಳನ್ನು ಸ್ತುತಿಸುತ್ತಿದ್ದ ಒಬ್ಬ ಶಿಷ್ಯ – ಮಾರ್ಗದ ಪಥಿಕನು – ಅವರಲ್ಲಿ ತಾನು ಕಂಡ ಸಣ್ಣದೊಂದು ತಪ್ಪಿನ ಬಗೆಗೆ ಹತಾಶನಾಗಿ ಗೋಳಾಡುವ ಹಂತವನ್ನು ಕಲ್ಪಿಸಿಕೊಳ್ಳಿ! ಇಂತಹ ನಿರ್ಣಾಯಕ ಹಂತದಲ್ಲಿ ಕೆಲವರು ಸಾಧನೆಯನ್ನು ಬಿಟ್ಟುಕೊಟ್ಟು, ಮಾರ್ಗದರ್ಶಿಯಿಂದ ದೂರವಾಗುತ್ತಾರೆ. ಗುರುಗಳೆಡೆಗಿನ ವಿರುದ್ಧ ಮನಸ್ಥಿತಿಯ ಬಗೆಗೆ ನಿರಂತರವಾಗಿ ಯೋಚಿಸುವುದರಿಂದ

ಉದ್ಭವಿಸುವ ಋಣಾತ್ಮಕ ಕಂಪನಗಳು ಖಂಡಿತವಾಗಿ ಆತನ ಮೇಲೆ ಪ್ರಭಾವ ಬೀರುತ್ತವೆ. ಅಲ್ಲದೆ, ಆ ಋಣಾತ್ಮಕತೆಯ ಸುಳಿಯಲ್ಲಿ ಗುರು-ಶಿಷ್ಯರಿಬ್ಬರೂ ಸಿಲುಕುವರಷ್ಟೇ ಅಲ್ಲದೆ, ಅಂತಹವರೇ ಆದ ಮತ್ತಷ್ಟು ಸಹಚರರೂ ಪ್ರಭಾವಿತರಾಗುತ್ತಾರೆ. ಪ್ರೇಮದ ಕಂಪನಕ್ಕೆ ಇರುವಂತೆಯೆ, ದ್ವೇಷದ ಕಂಪನಗಳಿಗೂ ತರಂಗ ಪರಿಣಾಮವಿರುತ್ತದೆ. ಈ ಬೆಳವಣಿಗೆಯ ನಂತರವೂ ಕರುಣಾಮಯ ಹಾಗು ದಯಾಳುವಾದ ಗುರು ಎಲ್ಲರನ್ನೂ ಸ್ವಾಗತಿಸುತ್ತಾರೆ. ಅವರು ಎಲ್ಲರಿಗೂ ಸಮರ್ಪಿಸಿಕೊಂಡು, ಸದಾ ಸುಲಭಭೇದ್ಯರಾಗಿರುತ್ತಾರೆ. ಸ್ವತಃ ತಮ್ಮ ವೈಯಕ್ತಿಕ ಶಾಂತಿಯ ಸಲುವಾಗಿ ಕಾಳಜಿಯಂತೂ ಅವರಲ್ಲಿ ಎಂದಿಗೋ ಸತ್ತುಹೋಗಿರುತ್ತದೆ. ಶಿಷ್ಯಂದಿರ ಹೃದಯದಲ್ಲಿ ತಮ್ಮ ಬಗೆಗಿನ ವೈಯಕ್ತಿಕ ಟೀಕೆಯನ್ನು ಕುರಿತು ಅವರಿಗೆ ಕಾಳಜಿ ಇರುವುದಿಲ್ಲ. ಏನೇ ಆಗಲಿ, ಪ್ರೇಮದಲ್ಲಿ ಯಾರೂ ಷರತ್ತುಗಳನ್ನು ಹಾಕುವುದಿಲ್ಲ!

ಗುರುವಿನ ದಯಾಳು ಸ್ವಭಾವವು, ತಾನು ಪ್ರೇಮಿಸುವ ಶಿಷ್ಯರ ಹೃದಯದಿಂದ ಹೊಮ್ಮುವ ಋಣಾತ್ಮಕ ಕಂಪನಗಳ ಪರಿಣಾಮಗಳಿಂದ ಆತನನ್ನು ರಕ್ಷಿಸುವುದಿಲ್ಲ.  ಯಾರಿಗೇ ಆಗಲಿ, ಖಿನ್ನತೆಯು ಮಾನಸಿಕ ಮತ್ತು ಭೌತಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ, ಗುರುಗಳೂ ಸಹ ಇದಕ್ಕೆ ಹೊರತಲ್ಲ. ವಾಸ್ತವದಲ್ಲಿ, ಗುರುಗಳ ಉನ್ನತ ಮಟ್ಟದ ಸಂವೇದನಾಶೀಲತೆಯ ಕಾರಣದಿಂದ, ಖಿನ್ನತೆಯು ಅವರ ಜೀವನದಲ್ಲಿ ಇನ್ನೂ ಹೆಚ್ಚಿನ ಹಾನಿಯನ್ನುಂಟುಮಾಡುತ್ತದೆ. ಒಮ್ಮೆ 70ನೇ ದಶಕದ ಕೊನೆಯಲ್ಲಿ ಏನಾಯಿತೆಂದರೆ, ಬಾಬೂಜಿಯವರು ಸೋದರಿ ಕಸ್ತೂರಿ ಹಾಗು ಇತರ ಹಿರಿಯ ಸದಸ್ಯರೊಂದಿಗಿದ್ದರು. ಅನಿರೀಕ್ಷಿತವಾಗಿ, ಪರಿಸರದಲ್ಲಿ ಒಂದು ಬದಲಾವಣೆಯಾದುದನ್ನು ಆಕೆ ಗ್ರಹಿಸಿದರು – ಅದು ಬಾಬೂಜಿಯವರ ಸ್ಥಿತಿಯಲ್ಲಿನ ಹಿಂದೆಗೆತ. ಅವರ ಪ್ರಜ್ಞೆ ಅದರ ವಿಸ್ತೃತ ಸ್ಥಿತಿಯಿಂದ ಕುಗ್ಗಿದುದನ್ನು ಆಕೆ ಕಂಡರು; ಇದ್ದಕ್ಕಿದ್ದಂತೆ ಅವರು ವಿಷಣ್ಣರಾಗಿದ್ದರು. ಸೋದರಿ ಕಸ್ತೂರಿ ಬಾಬೂಜಿಯವರಿಗೆ ಅದರ ಕಾರಣವನ್ನು ತಿಳಿಸುವಂತೆ ಕೇಳಿಕೊಂಡಾಗ, ಅವರು ಒಂದು ಕೇಂದ್ರದ ಸದಸ್ಯರು ಬಣಗಳನ್ನು ಕಟ್ಟಿಕೊಳ್ಳುವ ಮೂಲಕ ಋಣಾತ್ಮಕ ಹಾಗು ರಾಜಕೀಯ ವಾತಾವರಣವನ್ನು ಸೃಷ್ಟಿಸುತ್ತಿದ್ದಾರೆಂದು ಒಲ್ಲದ ಮನಸ್ಸಿನಿಂದ ಹೇಳಿದರು.

ಶಿಷ್ಯಂದಿರ ಹೃದಯವನ್ನು ಆವರಿಸಿಕೊಳ್ಳುವ ಪ್ರೇಮ–ದ್ವೇಷಗಳ ಸ್ಥಿತಿಗಳೆರಡನ್ನೂ ಗುರುಗಳು ವೀಕ್ಷಿಸುತ್ತಾರೆ. ಯಾರಲ್ಲಾದರೂ ಪ್ರೇಮವಿದ್ದರೆ, ಒಂದು ಬಗೆಯ ಆಕ್ರಮಣಶೀಲತೆ ಇರುತ್ತದೆ: ಉದಾಹರಣೆಗೆ, ಪ್ರೇಮಿಯನ್ನು ಭೇಟಿಯಾಗಲು ಯಾವ ಅಡೆತಡೆಯನ್ನೂ

ಲೆಕ್ಕಿಸದಿರುವಂತಹುದು. ಯಾರಾದರೂ ಕೋಪಗೊಂಡು ಗುರುಗಳಿಂದ ದೂರವಾಗಬಯಸುವುದೂ ವಿಭಿನ್ನ ಗತಿಯ ಆಕ್ರಮಣಶೀಲತೆಯೆ. ಧನಾತ್ಮಕ ಮತ್ತು ಋಣಾತ್ಮಕ ಭಾವನೆಗಳ ಎರಡು ಹಂತಗಳಲ್ಲೂ ಗುರುಗಳು ಶಿಷ್ಯನ ದಬ್ಬಾಳಿಕೆಗೆ  ಮೌನ ಪ್ರೇಕ್ಷಕರಾಗುತ್ತಾರೆ. ಅವರಿಗೆ ಬೇರೆ ಆಯ್ಕೆಯಾದರೂ ಏನಿದೆ? ಅವರು ಪ್ರಾರ್ಥಿಸುತ್ತಾರೆ ಮತ್ತು ನಿರೀಕ್ಷಿಸುತ್ತಾರೆ! ಶಿಷ್ಯನೂ ತಾಳ್ಮೆಯಿಂದಿರಬೇಕು. ಸಂಕ್ಷಿಪ್ತವಾಗಿ, ನಿಸ್ವಾರ್ಥ ಹಾಗು ಪರಿಶುದ್ಧ ಪ್ರೇಮಸಾಗರವನ್ನು ಬಂದು ಸೇರುವ ಅನೇಕ ಉಪನದಿಗಳ ಹಾಗು ಗುರುವಿನ ಸಂಗಮವಾಗುತ್ತದೆ.

ಶಿಷ್ಯನಲ್ಲಿರುವ ಭಾವನಾತ್ಮಕ ಆಕ್ರಮಣಶೀಲತೆಯ ಅನೇಕ ಹಂತಗಳಿಗೆ ಸಾಕ್ಷಿಯಾದರೂ ಕೂಡ, ಗುರುಗಳು ಶಿಷ್ಯನ ಅಹಂನಲ್ಲಿ ಅಪಾರ ಪ್ರಮಾಣದ ಪರಿಷ್ಕರಣವಾಗುವಂತೆ ನೋಡಿಕೊಳ್ಳುತ್ತಾರೆ. ಇದನ್ನು ಸಾಧಿಸಲು ಅವರು ವಿಶಿಷ್ಟವಾದ ಪರಿಸ್ಥಿತಿಗಳನ್ನು ಸೃಷ್ಟಿಸುತ್ತಲೇ ಹೋಗುತ್ತಾರೆ. ಬಹುಶಃ, ವಿಷಯಾಸಕ್ತಿಯ ಹಿಡಿತದಿಂದ ತಪ್ಪಿಸಿಕೊಳ್ಳುವುದು ಈ ಅಹಂನಿಂದ ಹೊರಬರುವುದಕ್ಕಿಂತ ಸುಲಭ. ಮೊದಲ ಸಂದರ್ಭದಲ್ಲಿ, ನಮಗೆ ಋಣಾತ್ಮಕ ಪ್ರಭಾವದ ಅರಿವಿರುತ್ತದೆ, ಆದರೆ ಉಲ್ಬಣವಾಗುತ್ತಿರುವ ಅಹಂನ ವಿಷಯವು ಹಾಗಲ್ಲ. ನೆನಪಿಡಿ, ಕಾಮಾಸಕ್ತಿಗೆ ಕೇವಲ ಐದು ತಡೆ ಅಥವಾ ವೃತ್ತಗಳಿವೆ, ಆದರೆ ಅಹಂಕಾರವು ಇಪ್ಪತ್ತಮೂರು ವೃತ್ತಗಳಲ್ಲಿ ಹನ್ನೊಂದನ್ನು ಆವರಿಸಿದೆ! ಶಿಷ್ಯನ ಅಹಂನ್ನು ಪರಿಷ್ಕರಿಸುವಾಗ ಗುರು ಅತೀವ ಜಾಗ್ರತೆಯಿಂದಿರಬೇಕು. ಕೆಲವೊಮ್ಮೆ ಎಲ್ಲ ಜಾಗರೂಕತಾ ವಿಧಾನಗಳ ನಂತರವೂ, ಶಿಷ್ಯನಿಗೆ ರೇಗುತ್ತದೆ. ಶಿಷ್ಯನಿಗೆ ನೋವಾಗುವುದನ್ನು ಕಂಡರೂ ಗುರು ಆ ಪಥದಲ್ಲಿ ಮುನ್ನಡೆಸಬೇಕು. ಕಬೀರನ ಮಾತುಗಳಲ್ಲಿ, ಗುರುವು ಕುಂಬಾರನಂತೆ ಮಡಕೆಯನ್ನು(ವ್ಯಕ್ತಿತ್ವವನ್ನು) ಹೊರಗಿನಿಂದ ತಟ್ಟುತ್ತ, ಒಳಗಿನಿಂದ ಆಧಾರ ನೀಡುವರು. ಈ ವಿಷಮಕಾಲದಲ್ಲಿ ಶಿಷ್ಯನು ಅನುಭವಿಸುವ ನೋವನ್ನು ಒಬ್ಬ ಮನುಷ್ಯನಾಗಿ ಗುರುಗಳೂ ಅನುಭವಿಸುತ್ತಾರೆ.

ಭಕ್ತಿ ಹೆಚ್ಚುತ್ತಿದ್ದಂತೆ, ಗುರುಗಳು ತಾವು ಲಭ್ಯವಾಗುವ ಅವಕಾಶಗಳನ್ನು ನೀಡುತ್ತ, ಶಿಷ್ಯನನ್ನು ಹತ್ತಿರಕ್ಕೆಳೆದುಕೊಳ್ಳುತ್ತಾರೆ. ಆ ಮೂಲಕ ಭಕ್ತನ ಜೀವನದಲ್ಲಿ ಒಂದು ನವಯುಗದ ಉದಯವಾಗುತ್ತದೆ. ಅವರ ಆಂತರಿಕ ಪರಿವರ್ತನೆಯಲ್ಲಿ ವೇಗವರ್ಧನೆಯಾಗುತ್ತದೆ ಹಾಗು ಆತ ಆಧ್ಯಾತ್ಮಿಕವಾಗಿ ಪರವಶನಾಗುತ್ತಾನೆ; ಅದು ಅಗಾಧ ಕೃತಜ್ಞತೆಯಲ್ಲಿ ಪರಿಣಮಿಸುತ್ತದೆ. ಹಾಗಿದ್ದರೂ ಅಪಾಯವಿನ್ನೂ ಇದ್ದೇ ಇರುತ್ತದೆ. ಪರಿವರ್ತನೆಯಾಗುವ ಈ ಸಂದರ್ಭಗಳಲ್ಲಿ, ಶಿಷ್ಯನು ತನ್ನನ್ನು ಇತರರಿಗಿಂತ ಶ್ರೇಷ್ಠನೆಂದು ಅಥವಾ ಉಳಿದವರಿಗಿಂತ ಪ್ರಧಾನನೆಂದು ಭಾವಿಸತೊಡಗಬಹುದು. ಇಂತಹ ಪರಿಸ್ಥಿತಿಯನ್ನು ಕಾಣುವ ಗುರುವಿನ ಹೃದಯ ಸಾವಿರ ಹೋಳಾಗುತ್ತದೆ.

ಗುರುಗಳೊಂದಿಗಿನ ನಮ್ಮ ಪಯಣದುದ್ದಕ್ಕೂ. ನಮಗೆ ಯಾವಾಗಲೂ ಒಂದು ಆಯ್ಕೆಯಿರುವುದು ಕಂಡುಬರುತ್ತದೆ – ಅದು ಬೃಹತ್ ಜಿಗಿತ ಅಥವಾ ತಾನೇ ಸೃಷ್ಟಿಸಿಕೊಂಡ ಕಪ್ಪು ರಂಧ್ರದೊಳಕ್ಕೆ ನಿರ್ನಾಮವಾಗುವುದು, ಇದನ್ನು ನಾನು ಸ್ವಯಂಕೃತ ಆಧ್ಯಾತ್ಮಿಕ ವಕ್ರತೆ ಎಂದು ಕರೆಯಬಯಸುತ್ತೇನೆ. ಒಮ್ಮೆ ನೀವು ಅಹಂಕಾರದ ಸುಳಿಯಲ್ಲಿ ಸಿಲುಕಿದರೆ, ಅದರಿಂದ ಹೊರಬರುವುದು ಬಹಳವೇ ಕಠಿಣ. ಹಾಗೇನಾದರೂ ಸಂಭವಿಸಿ, ನಿಮಗೆ ಈ ಅನರ್ಥಕಾರೀ ವಕ್ರತೆಯ ಅರಿವಾಗುತ್ತಿದ್ದಂತೆಯೆ, ಹಿಂದೆ ಸರಿಯಿರಿ ಹಾಗು ನಿಮ್ಮ ಪ್ರಯತ್ನಗಳನ್ನು ಮತ್ತಷ್ಟು ಶುದ್ಧ ಹೃದಯದೊಂದಿಗೆ ಪುನರಾಯೋಜಿಸಿರಿ; ಅದರೊಂದಿಗೆ ನಿಮ್ಮ, ಗುರುಗಳ ಹಾಗು ಅವರ ಸಾಮರ್ಥ್ಯಗಳನ್ನು ಅಳೆದುನೋಡಿರಿ. ಆಂತರಿಕವಾಗಿ ಗುರುಗಳ ಮೌಲ್ಯ ನಿರ್ಣಯಿಸುವುದು ಪಾಪವೇನಲ್ಲ. ಆ ಕ್ಷಣದಲ್ಲಿ ಹಾಗೆ ಮಾಡದಿದ್ದರೆ, ನೀವು ನಿಮ್ಮ ಯಾತ್ರೆಯಲ್ಲಿ ಮುಂದುವರೆಯಲು ಸಾಧ್ಯವಾಗುವುದಿಲ್ಲ. ಎಷ್ಟಿದ್ದರೂ, ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವ ಮಟ್ಟಕ್ಕೆ ಹೋಗಲು ಸಿದ್ಧನಾದವನಿಗೆ, "ಇವರು ನನ್ನ ಭಕ್ತಿಗೆ ಅರ್ಹರೇ?" ಎಂದು ಗುರುವನ್ನು ಪರೀಕ್ಷೆ ಮಾಡುವುದು ಕಡ್ಡಾಯ. ಹಾಗೆ ಮಾಡುವುದು ಗುರುಗಳಿಗೆ ಮಾಡುವ ಅಪಮಾನವೇನಲ್ಲ. ಹೃದಯ ಪೂರ್ಣತೃಪ್ತವಾದ ನಂತರವೇ ನಾವು ಪ್ರತ್ಯೇಕತೆಯ ಎಲ್ಲ ರಕ್ಷಣಾತ್ಮಕ ತಡೆಗಳನ್ನು ತೆಗೆದುಹಾಕುತ್ತೇವೆ. ಪ್ರೇಮದಲ್ಲಿ ಎಲ್ಲ ತಡೆಗಳೂ ಹಾಗೆಯೆ ಕರಗಿಹೋಗುತ್ತವೆ. ಶತ್ರುಗಳೊಂದಿಗೆ ಅಥವಾ ನಾವು ಇಷ್ಟಪಡದಿರುವವರೊಂದಿಗೆ ಮಾತ್ರ ರಕ್ಷಣಾತ್ಮಕ ವ್ಯವಸ್ಥೆ ಸುಸಿದ್ಧವಾಗಿರುತ್ತದೆ. ತಡೆಗಳು ಕರಗಿಹೋಗಿ, ಧೈರ್ಯ ಉತ್ತೇಜಿತಗೊಂಡ ಮೇಲೆ, ಬಿಂದು ಸಿಂಧುವಿನಲ್ಲಿ ಧುಮುಕಲು ಸಿದ್ಧವಾಗುತ್ತದೆ.

ದುರದೃಷ್ಟವಶಾತ್, ಬಹಳಷ್ಟು ಜನರು ಗುರುಗಳನ್ನು ಕುರಿತ ಗೊಂದಲದಿಂದ ಹೊರಬರಲು ಕೊಂಚ ಸಮಯ ತೆಗೆದುಕೊಳ್ಳುತ್ತಾರೆ; ಈ ಮಧ್ಯೆ ಅಪಾರ ಪ್ರಮಾಣದ ಭಾವನಾತ್ಮಕ ಶಕ್ತಿಯ ಬಳಕೆಯಾಗುತ್ತದೆ. ಈ ಕಗ್ಗತ್ತಲ ಕಾಲದುದ್ದಕ್ಕೂ, ವ್ಯಕ್ತಿಯು ನೆಲೆಗೊಳ್ಳದೆ, ಉದ್ದೇಶರಹಿತನಾಗಿ ಉಳಿಯುತ್ತಾನೆ. ಈ ನಿರೀಕ್ಷಿತ ಸಮಯದಲ್ಲಿ, ಗುರುಗಳೂ ತಳಮಳದಿಂದಿರುತ್ತಾರೆ. ಅವರು ಶಿಷ್ಯನೊಂದಿಗೆ ಅನುರಣಿಸಿ, ಆತನ ಯೋಗಕ್ಷೇಮ ಹಾಗು ಸ್ಥಿರತೆಯ ಕುರಿತಾದ ಕಾಳಜಿಯಿಂದ ಬಾಧಿತರಾಗುತ್ತಾರೆ. ಶಿಷ್ಯನ ಸುಖಕರ ಪ್ರಯಾಣಕ್ಕಾಗಿ ಗುರುಗಳು ಈಗ ಕಾರ್ಯವನ್ನು ತೀವ್ರಗೊಳಿಸಬೇಕು. ಈ ನಾಜೂಕಾದ ಹಂತದಲ್ಲಿ, ಶಿಷ್ಯನಲ್ಲಿ ಯಾವುದೇ ವಕ್ರತೆ ರೂಪುಗೊಳ್ಳಲು ಬಿಡುವಂತಿಲ್ಲ.

ಪ್ರತಿಯೊಂದು ಸಂದರ್ಭದಲ್ಲೂ, ಸ್ವ–ಪ್ರಾಮುಖ್ಯತೆಯೇ ಮೊದಲ ಅಪರಾಧಿ ಹಾಗು ಅದೇ ನಮ್ಮನ್ನು ಆಧ್ಯಾತ್ಮಿಕ ಜಡಸ್ಥಿತಿಯ ಕಾಲಘಟ್ಟದಲ್ಲಿ ಕಟ್ಟಿಹಾಕುತ್ತದೆ. ಅಹಂಕಾರ ತನ್ನ ಹೆಡೆಯೆತ್ತುತ್ತಲೇ ಇರುತ್ತದೆ! ಗುರುಗಳು

ತೆಗೆದುಕೊಳ್ಳುವ ತಿದ್ದುಪಡಿ ವಿಧಾನಗಳು ಹಾಗು ಸಲಹೆಗಳು ನಮ್ಮ ಹೃದಯವನ್ನು ಆಳವಾಗಿ ಘಾಸಿಗೊಳಿಸಬಹುದು. ದುರ್ದೈವದಿಂದಾಗಿ, ಅಹಂಗೆ ಅನಂತ ಹೆಡೆಗಳಿವೆ; ಒಂದನ್ನು ನಾಶ ಮಾಡುತ್ತಿದ್ದಂತೆಯೆ, ಅಗೋ, ಮತ್ತೊಂದು ತನ್ನ ಹೆಡೆಯನ್ನೆತ್ತುತ್ತದೆ. ಎಂದು ನಮಗೆ ಈ ಆಟದ ನಿರರ್ಥಕತೆ ಅರ್ಥವಾಗಿ, ನಮ್ಮನ್ನು ಪ್ರೇಮಪೂರ್ವಕವಾಗಿ ಮತ್ತು ಶಾಶ್ವತವಾಗಿ ಸಮರ್ಪಿಸಿಕೊಳ್ಳುವವರೆಗೆ ಈ ಆಟ ಅನಂತಕಾಲದವರೆಗೂ ನಡೆಯುತ್ತಲೇ ಇರುತ್ತದೆ. ಈಗ ನಾವು ಮನೆ ತಲುಪಿದೆವು. ಮತ್ತೆಷ್ಟು ಕಾಲ ಕಾಯುವುದು? ನಾವು ಪರಸ್ಪರ ಹಂಚಿಕೊಳ್ಳುವ ಸಮಯಕ್ಕೆ ಮಿತಿಯಿದೆಯೆಂದು ಅರಿತುಕೊಳ್ಳಿ. ನಮ್ಮ ಬಳಿ ಅನಂತಕಾಲವಿಲ್ಲ! ಒಮ್ಮೆ ನಮ್ಮ ಹೃದಯ ಎಲ್ಲ ಬಗೆಯಿಂದಲೂ ಒಪ್ಪಿಕೊಂಡಿತೆಂದರೆ, ಅದು ನಮ್ಮನ್ನು ನಾವು ಸಂಪೂರ್ಣವಾಗಿ ಅರ್ಪಿಸಿಕೊಳ್ಳುವ ಸಮಯ.

ಗೌರವಾದರಗಳೊಂದಿಗೆ,
ಕಮಲೇಶ್ ಪಟೇಲ್